# ಲೆಕ್ಕಪತ್ರ ವಿಭಾಗ

- ಲೆಕ್ಕಪತ್ರ ವಿಭಾಗಕ್ಕೆ ಮುಖ್ಯ ಲೆಕ್ಕಾಧಿಕಾರಿಯವರು ಮುಖ್ಯಸ್ಥರಾಗಿರುತ್ತಾರೆ.
- ಮುಖ್ಯ ಲೆಕ್ಕಾಧಿಕಾರಿಯವರ ವಿಭಾಗವು ಬೃ.ಬೆಂ.ಮ.ಪಾ.ಯ ಕೋಶಾಗಾರ(ಬೊಕ್ಕಸ)ವಾಗಿ ಕೆಲಸ ಮಾಡುತ್ತಿದೆ.
- ಎಲ್ಲಾ ಬಗೆಯ ರಸೀದಿ ಹಾಗೂ ಪಾವತಿಗಳನ್ನು ಕ್ರೋಢೀಕರಿಸುತ್ತದೆ.
- ಪೂರಕ ಆಯವ್ಯಯ ಸಿದ್ಧಪಡಿಸುವುದು ಮತ್ತು ಆರ್ಥಿಕ ವಿಷಯಗಳ ಬಗ್ಗೆ ಆಯುಕ್ತರಿಗೆ ಸಲಹೆ ನೀಡುವುದು ಒಳಗೊಂಡಂತೆ ಬೃ.ಬೆಂ.ಮ.ಪಾ.ಯ ವಾರ್ಷಿಕ ಮುಂಗಡ ಪತ್ರವನ್ನು ಸಿದ್ಧಪಡಿಸುವಲ್ಲಿ ಆಯುಕ್ತರಿಗೆ ನೆರವಾಗುತ್ತದೆ.
- ವಿವಿಧ ಬ್ಯಾಂಕ್ ಖಾತೆಗಳ ರಸೀದಿ ಮತ್ತು ಪಾವತಿಗಳ ಮೇಲ್ವಿಚಾರಣೆ ಹಾಗೂ ಸಮನ್ವಯ ಕಾರ್ಯ ನಡೆಸುತ್ತದೆ.
- ಬೃ.ಬೆಂ.ಮ.ಪಾ.ಯ ವಾರ್ಷಿಕ ಲೆಕ್ಕಪತ್ರಗಳ ಕ್ರೋಢೀಕರಿಸುತ್ತದೆ ಹಾಗೂ ಅಂತಿಮಗೊಳಿಸುತ್ತದೆ.
- ಮೇಲಿನ ಅಧಿಕಾರಿಗಳಿಗೆ ಹಾಗೂ ಸರ್ಕಾರಕ್ಕೆ ಆರ್ಥಿಕ ಸ್ಥಿತಿಗತಿಯ ವಿವರ ಸಲ್ಲಿಸುತ್ತದೆ.
- ಆಯುಕ್ತರ ಅನುಮತಿಯೊಂದಿಗೆ ಬೃ.ಬೆಂ.ಮ.ಪಾ.ಯ 8 ವಲಯ ಕಛೇರಿಗಳ ಕಾರ್ಯಪಾಲಕ ಅಭಿಯಂತರರುಗಳು ಹಾಗೂ ಸಹಾಯಕ ನಿಯಂತ್ರಕರಿಗೆ ಎಲ್.ಓ.ಸಿ. ಬಿಡುಗಡೆ ಮಾಡುತ್ತದೆ.
- ಬೃ.ಬೆಂ.ಮ.ಪಾ.ಗೆ ಸಂಬಂಧಿಸಿದಂತೆ ಸರ್ಕಾರದೊಡನೆ ಆರ್ಥಿಕ ವಿಷಯಗಳ ಬಗ್ಗೆ ಮಾತುಕತೆ ನಡೆಸುತ್ತದೆ.
- ಅನುದಾನಗಳಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸುತ್ತದೆ.
- ನಿಧಿ ಆಧಾರಿತ ಲೆಕ್ಕಪತ್ರ ವ್ಯವಸ್ಥೆಯಡಿ 2002–03 ರಿಂದ ಲೆಕ್ಕಪತ್ರ ನಿರ್ವಹಿಸುತ್ತಿದೆ.